# ಪವಿತ್ರ ಉತ್ಸವ ಕುಂಭಮೇಳ

ಭಾರತ ಉತ್ಸವಗಳ ನಾಡು. ಈ ಉತ್ಸವಗಳಲ್ಲಿ ಅತ್ಯಂತ ಪ್ರಸಿದ್ಧವಾದುದು, ಅತ್ಯಧಿಕ ಭಕ್ತರನ್ನು ಆಕರ್ಷಿಸುವುದು ಕುಂಭಮೇಳ. ಈ ಜನವರಿಯಲ್ಲಿ ಪ್ರಯಾಗದಲ್ಲಿ ನಡೆಯುವ ಪೂರ್ಣಕುಂಭ ಮೇಳಕ್ಕೆ ಸಂಬಂಧಿಸಿದಂತೆ ಈ ಕಿರು ಲೇಖನ.

ಆಕೆ ಪಶ್ಚಿಮ ಬಂಗಾಳ ರಾಜ್ಯದಿಂದ ಬಂದಿದ್ದ ಒಬ್ಬ ನಿರಕ್ಷರ ಮಹಿಳೆ. ತುಂಬಿದ ಬಸ್ಸಿನಲ್ಲಿ ದಿನಗಳಷ್ಟು ಕಾಲ ಪ್ರಯಾಣ ಮಾಡಿ ೧೯೯೮ರ ಕುಂಭಮೇಳಕ್ಕಾಗಿ ಹರಿದ್ವಾರದ ಗಂಗೆಯ ತಟಕ್ಕೆ ಬಂದಿದ್ದಾರೆ. ನೆಲವೇ ಹಾಸುಗೆ, ಆಕಾಶವೇ ಹೊದಿಕೆ ಆ ಶ್ರದ್ಧಾ ಪೂರಿತ ಮಾತೆಗೆ ಆಹಾರ ಉಚಿತವಾಗಿ ಪ್ರಸಾದ ನೀಡುವ ಶಿಬಿರಗಳಲ್ಲಿ. ಆಕೆ ಹೇಳುತ್ತಾರೆ : 'ಹೌದು, ನಾವು ತುಂಬ ಬಡವರು. ಆದರೆ ನಮಗೆ ಇರುವುದಷ್ಟೇ ಸಾಕು. ಪರಮಾತ್ಮನಲ್ಲಿ ನಾನು ಹಣವನ್ನು ಬೇಡಿಕೊಳ್ಳಲಿಲ್ಲ. ಬದಲಾಗಿ ಶಾಂತಿಗಾಗಿ ಹಾಗೂ ಮುಕ್ತಿಗಾಗಿ ಬೇಡಿಕೊಂಡೆ.' ಈ ದೀನ ಗ್ರಾಮೀಣ ಮಹಿಳೆಯ ಪ್ರಾರ್ಥನೆಯೇ ಪ್ರಪಂಚದ ಅತಿದೊಡ್ಡ ಆಧ್ಯಾತ್ಮಿಕ ಉತ್ಸವವಾದ ಕುಂಭಮೇಳದ ಸಾರಭೂತ ಭಾವವಾಗಿದೆ. ಆಕೆಗೆ ಹಾಗೂ ಆಕೆಯಂತೆಯೇ ಅಲ್ಲಿ ನೆರೆದಿದ್ದ ಲಕ್ಷಾಂತರ ಶ್ರದ್ಧಾಳುಗಳಿಗೆ, ಎಲ್ಲ ಪ್ರಾಪಂಚಿಕ ವ್ಯವಹಾರಕ್ಕಿಂತಲೂ, ಕುಂಭಪರ್ವದ ಪವಿತ್ರ ಗಳಿಗೆಯಂದು ಮಾಡುವ ಗಂಗಾಸ್ನಾನ ಅತಿಮುಖ್ಯವಾಗಿದೆ. ಇದಕ್ಕಾಗಿ ಅವರುಗಳು ಎಂತಹ ಕಷ್ಟವನ್ನಾದರೂ ಸಹಿಸಲು ತಯಾರಿರುತ್ತಾರೆ. ಸಾವಿರಾರು ಮೈಲಿ ಪ್ರಯಾಣ ಮಾಡುತ್ತಾರೆ. ವೃದ್ಧರು, ಮಹಿಳೆಯರಾದಿಯಾಗಿ ಎಲ್ಲರೂ ಆ ಪವಿತ್ರಸ್ನಾನಕ್ಕಾಗಿ ಎದುರು ನೋಡುತ್ತಿರುತ್ತಾರೆ.

ಕುಂಭಮೇಳದ ಪೌರಾಣಿಕ ಹಿನ್ನಲೆ ಹೀಗಿದೆ. ದೇವತೆಗಳು ಮತ್ತು ರಾಕ್ಷಸರು ಅಮೃತಕ್ಕಾಗಿ ಕ್ಷೀರಸಾಗರವನ್ನು ಕಡೆಯಲು ಪ್ರಾರಂಭಿಸಿದರು. ಮೊದಲು ಉದ್ಭವಿಸಿದ್ದು ಕಾರ್ಕೋಟಕ ವಿಷ. ಜಗತ್ತನ್ನೇ ಸುಡುತ್ತಿದ್ದ ಆ ವಿಷವನ್ನು ನುಂಗಿ ಕಂಠದಲ್ಲಿರಿಸಿಕೊಂಡು ಶಿವ ವಿಷಕಂಠನಾದನು. ಬಹಳ ಕಾಲದ ನಂತರ ಧನ್ವಂತರಿಯು ಅಮೃತದ ಕುಂಭದೊಡನೆ ಮೇಲೆದ್ದು ಬಂದನು. ಆ ಕುಂಭವನ್ನು ಅಸುರರು ಕಿತ್ತುಕೊಂಡು ಅಪಹರಿಸಿ ಬಿಟ್ಟರು. ಅಸುರರು ಅಮೃತವನ್ನು ಸೇವಿಸಿ ಅಮರರಾದರೆ ಪ್ರಪಂಚಕ್ಕೆ ದುರ್ದಶೆ ಖಂಡಿತ. ಅದನ್ನು ತಪ್ಪಿಸಲು ಇಂದ್ರದೇವನ ಮಗ ಜಯಂತನೆಂಬುವನು ಅಸುರರಿಂದ ಆ ಅಮೃತ ಕುಂಭವನ್ನು ತಿರುಗಿ ಪಡೆಯುವುದಕ್ಕೆ ಅವರನ್ನು ಬೆಂಬೆತ್ತಿ ಯಶಸ್ವಿಯಾದನು. ಅಸುರರ ತಾಣದಿಂದ ದೇವತೆಗಳ ನಿವಾಸದತ್ತ ಬರಲು ಆತನಿಗೆ ೧೨ ದಿನ ಹಿಡಿಯಿತಂತೆ. ಬಳಲಿದ್ದ ಅವನು ನಾಲ್ಕು ಸ್ಥಳಗಳಲ್ಲಿ ವಿಶ್ರಾಂತಿ ತೆಗೆದುಕೊಂಡ. ಆಗ ತುಂಬಿದ ಕುಂಭದಿಂದ ಅಮೃತದ ಕೆಲ ಬಿಂದುಗಳು ಅಲ್ಲಲ್ಲಿ ಬಿದ್ದು ಆ ಸ್ಥಳಗಳನ್ನು ಪುನೀತಗೊಳಿಸಿದವು. ಅವುಗಳೆಂದರೆ, ಪ್ರಯಾಗ (ಅಲಹಾಬಾದ್), ಹರಿದ್ವಾರ, ಉಜ್ಜೈನಿ ಮತ್ತು ನಾಸಿಕ್. ಈ ಘಟನೆಯ ಸ್ಮರಣಾರ್ಥವಾಗಿಯೇ, ಹನ್ನೆರಡು ವರ್ಷಗಳಿಗೊಮ್ಮೆ ಈ ನಾಲ್ಕು ತೀರ್ಥಕ್ಷೇತ್ರಗಳಲ್ಲಿ ಕುಂಭಮೇಳವು ಜರಗುವುದು. ದೇವತೆಗಳ ಒಂದು ದಿನ ಮಾನವರ ಒಂದು ವರ್ಷವಾದ್ದರಿಂದ ಹನ್ನೆರಡು ದಿನಗಳ ದ್ಯೋತಕವಾಗಿ ಹನ್ನೆರಡು ವರ್ಷಗಳಿಗೊಮ್ಮೆ ಈ ಉತ್ಸವದ ಆಚರಣೆ ಪದ್ಧತಿಯಲ್ಲಿದೆ.

ಪ್ರಯಾಗದಲ್ಲಿ ನಡೆಯುವ ಕುಂಭಮೇಳ ಬೃಹತ್ತಾದುದು. ಸೂರ್ಯ ಮತ್ತು ಚಂದ್ರ ಮಕರ ರಾಶಿಯನ್ನು ಪ್ರವೇಶಿಸುವ ಪರ್ವಕಾಲವೇ ಇಲ್ಲಿ ಪವಿತ್ರಸ್ನಾನಕ್ಕೆ ಗೊತ್ತು ಮಾಡಿರುವ ಪುಣ್ಯಕಾಲ. ಇದನ್ನು ಕುಂಭಯೋಗ ಎನ್ನುವರು. ಅಂದಿನ ದಿನ ಅಮಾವಾಸ್ಯೆಯಾಗಿದ್ದು, ಗುರು ವೃಷಭ ರಾಶಿಯಲ್ಲಿರುತ್ತಾನೆ. ಈ ಮೇಳದಲ್ಲಿನ ಇತರ ಪವಿತ್ರಸ್ನಾನ ದಿನಗಳೆಂದರೆ ಮಕರ ಸಂಕ್ರಾಂತಿ, ಪುಷ್ಯ ಪೂರ್ಣಿಮಾ ಮತ್ತು ವಸಂತ ಪಂಚಮಿ. ಹನ್ನೆರಡು ವರ್ಷಗಳಿಗೊಮ್ಮೆ ಪೂರ್ಣಕುಂಭಮೇಳ ನಡೆದರೆ, ಆರು ವರ್ಷಗಳಿಗೊಮ್ಮೆ ಅರ್ಧಕುಂಭಮೇಳ ನಡೆಯುತ್ತದೆ.

ಕುಂಭಮೇಳ ಜಗತ್ತಿನ ಅತಿದೊಡ್ಡ ಆಧ್ಯಾತ್ಮಿಕ ಉತ್ಸವವಷ್ಟೇ ಅಲ್ಲ, ಅತಿ ಪುರಾತನವಾದ ಧಾರ್ಮಿಕ ಕ್ರಿಯೆ ಕೂಡಾ. ಇತಿಹಾಸಜ್ಞ ಶ್ರೀ ಎಸ್.ಬಿ.ರಾಯ್ ಈ ಧಾರ್ಮಿಕ ಪದ್ಧತಿ ಕ್ರಿ.ಪೂ. ೧೦,೦೦೦ ದಿಂದಲೂ ನಡೆದುಕೊಂಡು ಬಂದಿದೆ ಎಂದು ಹೇಳುತ್ತಾರೆ. ಕ್ರಿ.ಪೂ. ೪ನೆಯ ಶತಮಾನದಲ್ಲಿ ಬಂದಿದ್ದ ಗ್ರೀಕ್ ಯಾತ್ರಿಕ ಮೆಗಸ್ತಾನೀಸ್ ಕುಂಭಮೇಳದಂಥದ್ದೇ ಒಂದು ಉತ್ಸವದ ವಿವರಣೆಯನ್ನು ತನ್ನ ಪ್ರವಾಸ ಕಥನದಲ್ಲಿ ನೀಡುವನು. ಚೀನಾ ದೇಶದ ಬೌದ್ಧ ಭಿಕ್ಷು ಹುಯೆನ್‌ತ್ಸಾಂಗ್ ಭಾರತಕ್ಕೆ ಕ್ರಿ.ಶ. ೬೨೯ ರಿಂದ ೬೪೫ ರವರೆಗೆ ಬಂದು ಪ್ರಯಾಣ ಮಾಡಿದ್ದನು. ಅವನು ರಾಜಾ ಹರ್ಷವರ್ಧನ ತನ್ನ ಆಳ್ವಿಕೆಯ ೫ನೆಯ ವರ್ಷದಲ್ಲಿ, ಪ್ರಯಾಗದಲ್ಲಿ ಒಂದು ತಿಂಗಳ ಕಾಲ ಜರುಗಿದ ಸನಾತನವಾದ ಉತ್ಸವದಲ್ಲಿ ಪಾಲ್ಗೊಂಡಿದ್ದನು ಎಂದು ಬರೆದಿದ್ದಾನೆ. ೧೪ನೆಯ ಶತಮಾನದ ಹೊತ್ತಿಗೆ ಕುಂಭಮೇಳವು ಈಗಿನ ಸ್ವರೂಪವನ್ನು ತಾಳಿರುವುದನ್ನು ಗುರುತಿಸಬಹುದು. ಈ ಉತ್ಸವದ ಪ್ರವರ್ತಕರು ಆದಿ ಶಂಕರಾಚಾರ್ಯರು ಎಂದು ಬಹಳ ಮಂದಿ ನಂಬುತ್ತಾರೆ. ಮುಸ್ಲಿಂ ಧಾಳಿಕೋರ ತೈಮೂರ್ ೧೩೯೮ರ ಕುಂಭಮೇಳದಲ್ಲಿ ನೆರೆದಿದ್ದ ಯಾತ್ರಿಕರ ಸಾಮೂಹಿಕ ಹತ್ಯೆಗೈದದ್ದು ಇತಿಹಾಸದಲ್ಲಿ ದಾಖಲಾದ ಸಂಗತಿ. ಮುಸ್ಲಿಮರ ಈ ದಬ್ಬಾಳಿಕೆಯಿಂದ ರಕ್ಷಣೆ ಪಡೆಯಲೆಂದೇ ನಾಗಾಗಳೆಂಬ ಉಗ್ರಸಂನ್ಯಾಸಿಗಳ ಪಂಗಡವು ಸೃಷ್ಟಿಯಾಯಿತು ಎನ್ನಲಾಗಿದೆ. ಇಂದಿಗೂ, ದಿಗಂಬರರಾದ ಈ ನಾಗಾ ಸಂನ್ಯಾಸಿಗಳು ಕುಂಭಮೇಳದ ಒಂದು ಪ್ರಮುಖ ಆಕರ್ಷಣೆಯ ಕೇಂದ್ರವಾಗಿದ್ದಾರೆ.

ಹಲವು ಪಂಗಡಗಳಿಗೆ ಸೇರಿದ ಸಾವಿರಾರು ಸಂನ್ಯಾಸಿಗಳು ಕುಂಭಮೇಳದಲ್ಲಿ ನೆರೆಯುತ್ತಾರೆ. ಈ ಪಂಗಡಗಳನ್ನು ಅಖಾಡಾಎಂದು ಕರೆಯುತ್ತಾರೆ. ಒಂದೊಂದು ಅಖಾಡಾದಲ್ಲಿಯೂ, ಶ್ರೀ ಶಂಕರಾಚಾರ್ಯರೇ ಹುಟ್ಟುಹಾಕಿದ ದಶನಾಮಿ ಸಂಪ್ರದಾಯಕ್ಕೆ ಸೇರಿದ ಹತ್ತು ವಿವಿಧ ನಾಮಧೇಯವುಳ್ಳ ಸಂನ್ಯಾಸಿಗಳು ಇರುತ್ತಾರೆ. ಅವರೆಂದರೆ ಸರಸ್ವತಿ, ಪುರಿ, ಬಾಣ, ತೀರ್ಥ, ಗಿರಿ, ಪರ್ವತ,

ಭಾರತಿ,ಅರಣ್ಯ,ಆಶ್ರಮ ಮತ್ತು ಸಾಗರ. ಈ ಸಂನ್ಯಾಸಿ ಪಂಗಡಗಳಲ್ಲಿ ಮೊದಲು ಪವಿತ್ರಸ್ನಾನ ಮಾಡುವ ಅರ್ಹತೆ ಪಡೆದವರು ಯಾರು ಎಂಬ ವಿಷಯದ ಬಗ್ಗೆ ವಾಗ್ವಿವಾದ ಘರ್ಷಣೆ ನಡೆಯುವುದೂ ಉಂಟು.

ಕುಂಭಮೇಳವು ಪವಿತ್ರಸ್ನಾನಕ್ಕಾಗಿ ನೆರೆಯುವ ಶ್ರದ್ಧಾಳುಗಳ ಉತ್ಸವವಾಗಿ ಸೀಮಿತವಾಗದೆ, ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ವಿಚಾರವಿನಿಮಯದ ಕಾಲವೂ ಆಗಿದೆ. ಹಿಂದಿನ ಕಾಲದಲ್ಲಿ ಹಿಂದೂಗಳ ಆಚಾರ ವಿಚಾರ ಪದ್ಧತಿ ಸ್ಮೃತಿಗಳ ಪ್ರಕಾರ ಇರುತ್ತಿತ್ತು. ಆ ಸ್ಮೃತಿಗಳನ್ನು ಕಾಲದ ಗತಿಗೆ ಅನುಗುಣವಾಗಿ ಪರಿಷ್ಕರಿಸಬೇಕಾಗಿತ್ತು. ಈ ಮೇಳಗಳಲ್ಲಿ ಮಹಾತ್ಮರು, ವಿದ್ವಾಂಸರು ನೆರೆದು, ಚರ್ಚೆ ನಡೆಸಿ ಆ ಕಾರ್ಯವನ್ನು ಮಾಡುತ್ತಿದ್ದರು. ದೇಶದ ವಿವಿಧ ಭಾಗಗಳಲ್ಲಿರುತ್ತಿದ್ದ ಧಾರ್ಮಿಕ ಮುಖಂಡರು ಒಂದೆಡೆ ಸೇರಿ ಈ ಬಗೆಯ ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳಲು ಅವಕಾಶವೀಯುತ್ತಿತ್ತು ಈ ಕುಂಭ ಪರ್ವಕಾಲ. ಇದಲ್ಲದೆ, ಈ ಮೇಳದಲ್ಲಿಯೇ ವಿವಿಧ ಸಂನ್ಯಾಸಿಗಳ ಪಂಗಡದವರು ತಮ್ಮ ನಾಯಕನನ್ನು ಆರಿಸುವರು ಮತ್ತು ತಾವು ಎದುರಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಕಂಡುಕೊಳ್ಳುವರು. ಮಹಾನಿರ್ವಾಣಿ ಅಖಾಡಾದ ಮಹಂತ ಗಂಗಾಪುರೀಜಿ ಹೇಳುವಂತೆ ಕುಂಭಮೇಳವು ನಮ್ಮ ನಾಡನ್ನು ಒಂದಾಗಿ ಬೆಸೆಯುವುದು.

ಹಿಂದಿನ ಪೂರ್ಣಕುಂಭಮೇಳ ನಡೆದಿದ್ದು ಹರಿದ್ವಾರದಲ್ಲಿ, ೧೯೯೮ರಲ್ಲಿ, ಬ್ರಹ್ಮಕುಂಡ ಎಂಬ ಗಂಗಾನದಿಯ ಒಂದು ಪವಿತ್ರ ಜಾಗದಲ್ಲಿ. ಅಲ್ಲಿ ಜನವರಿಯಿಂದ ಏಪ್ರಿಲ್‌ವರಗೆ ಸುಮಾರು ೨.೫ ಕೋಟಿ ಭಕ್ತರು ಮಿಂದು ಧನ್ಯರಾದರು. ಅತ್ಯಂತ ಪವಿತ್ರ ಸ್ನಾನದ ದಿನವಾದ ಏಪ್ರಿಲ್ ೧೪ರಂದು ೧ ಕೋಟಿ ಜನ ಸ್ನಾನ ಮಾಡಿದರು. ೧೯೮೯ರಲ್ಲಿ ಪ್ರಯಾಗದಲ್ಲಿ ನಡೆದ ಕುಂಭಮೇಳದ ಪವಿತ್ರ ಸ್ನಾನದ ದಿನವಾದ ಫೆಬ್ರವರಿ ೬ ರಂದು ೧.೫ ಕೋಟಿ ಜನ ಸ್ನಾನ ಮಾಡಿದರು. ಇದು ಒಂದು ದಾಖಲೆಯಾಗಿ ಉಳಿದಿದೆ.

ಕುಂಭಮೇಳವು ವಿಸ್ತಾರವಾದ ಬಯಲು ಮೈದಾನದಲ್ಲಿ ನಡೆಯುವುದು. ಸರ್ಕಾರದವರು ರಸ್ತೆ, ವಿದ್ಯುಚ್ಛಕ್ತಿ, ಕುಡಿಯುವ ನೀರು ಮತ್ತು ನೈರ್ಮಲ್ಯ ಪಾಲನೆಗಳಂತಹ ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತಾರೆ. ವಿವಿಧ ಆಶ್ರಮಗಳು, ಸ್ವಯಂಸೇವಾ ಸಂಸ್ಥೆಗಳು ಮತ್ತು ದಾನಿಗಳು ಗುಡಾರಗಳನ್ನು ನಿರ್ಮಿಸಿ ಬಂದ ಭಕ್ತಜನರಿಗೆ ಉಚಿತ ವಸತಿ ಮತ್ತು ಊಟೋಪಚಾರಗಳ ವ್ಯವಸ್ಥೆಯನ್ನು ಮಾಡಿರುತ್ತಾರೆ. ಮೇಳದ ಕಾಲದುದ್ದಕ್ಕೂ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜಿತವಾಗಿರುತ್ತವೆ. ಪವಿತ್ರಸ್ನಾನದ ದಿನದಂದು ವಿವಿಧ ಅಖಾಡಾಗಳ ಸಾಧುಗಳು ವರ್ಣರಂಜಿತ ಮೆರವಣಿಗೆಯಲ್ಲಿ ಗಂಗೆಯ ತಟದೆಡೆಗೆ ಸಾಗುವುದನ್ನು ನೋಡುವುದೇ ಕಣ್ಣಿಗೆ ಹಬ್ಬ. ಎಲ್ಲೆಲ್ಲೂ ಆಧ್ಯಾತ್ಮಿಕ ವಾತಾವರಣ, ಉತ್ಸುಕತೆ, ಭಕ್ತಿಭಾವವನ್ನು ನಾವು ಕಾಣಬಹುದು. **ಗಂಗಾಮಾತಾಕೀ ಜೈ** ಎಂಬ ಉದ್ಘೋಷದೊಂದಿಗೆ ಲಕ್ಷಗಟ್ಟಲೆ ಭಕ್ತಜನರು ಗಂಗೆಯಲ್ಲಿ ಸ್ನಾನಮಾಡುವರು. ಇಂತಹ ಅಪೂರ್ವ ಸಮಾವೇಶ ಇಡೀ ಜಗತ್ತಿನಲ್ಲಿ ಇದೊಂದೇ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇನ್ನೊಂದು ವೈಶಿಷ್ಟ್ಯವೆಂದರೆ, ನೂರಾರು ವಿದೇಶೀಯರು ಈ ಭಾರೀ ಜನಸಮೂಹವನ್ನು ದರ್ಶಿಸಲು ಹಾಗೂ ಇಲ್ಲಿನ ಅಪೂರ್ವ ವಾತಾವರಣವನ್ನು ಸವಿಯಲು ಬರುವುದು.



ಕುಂಭಮೇಳದ ಆವರಣದಲ್ಲಿನ ಯಾತ್ರಾರ್ಥಿಗಳ ಗುಡಾರಗಳು

ನೂತನ ಸಹಸ್ರಮಾನದ ಪ್ರಥಮ ಮಹಾಕುಂಭಮೇಳವು ಪ್ರಯಾಗದಲ್ಲಿ ೯ನೇ ಜನವರಿ ೨೦೦೧ರಿಂದ ೮ನೇ ಫೆಬ್ರವರಿಯವರಗೆ ನಡೆಯಲಿದೆ. ಈ ಮಹಾನ್ ಉತ್ಸವದಲ್ಲಿ ಒಂದೂವರೆ ಕೋಟಿ ಯಾತ್ರಾರ್ಥಿಗಳು ಹಾಗೂ ಸಾಧುಸಂತರು ಭಾಗವಹಿಸುವರೆಂದು ಅಂದಾಜು ಮಾಡಲಾಗಿದೆ. ಈ ಬಾರಿಯ ಕುಂಭಮೇಳದಲ್ಲಿ ಪವಿತ್ರಸ್ನಾನದ ಮುಖ್ಯದಿನಗಳು ಹೀಗಿವೆ : ೯ನೇ ಜನವರಿ ಪುಷ್ಯ ಪೂರ್ಣಿಮೆ, ೧೪ನೇ ಜನವರಿ ಮಕರ ಸಂಕ್ರಾಂತಿ, ೨೪ನೇ ಜನವರಿ ಮೌನಿ ಅಮಾವಾಸ್ಯೆ, ೨೯ನೇ ಜನವರಿ ವಸಂತ ಪಂಚಮಿ ಮತ್ತು ೮ನೇ ಫೆಬ್ರವರಿ ಮಾಘಪೂರ್ಣಿಮೆ.

ಅಲಹಾಬಾದಿನಲ್ಲಿ ರಾಮಕೃಷ್ಣ ಮಿಶನ್ನಿನ ಶಾಖೆಯೊಂದಿದೆ. ಅದು ಪ್ರತಿ ಕುಂಭಮೇಳದ ಸಂದರ್ಭದಲ್ಲಿಯೂ, ಮೇಳಸ್ಥಾನದಲ್ಲಿ ಯಾತ್ರಾರ್ಥಿಗಳ ಮತ್ತು ಸಾಧುಗಳ ಸೇವೆಗಾಗಿ ಶಿಬಿರವೊಂದನ್ನು ತೆರೆಯುತ್ತದೆ. ಅದರಂತೆ ಈ ಬಾರಿಯೂ ಕೆಳಕಾಣಿಸಿದ ಸೇವಾ ಕಾರ್ಯಗಳನ್ನು ರಾಮಕೃಷ್ಣ ಮಿಶನ್ನಿನ ಕೇಂದ್ರವು ತನ್ನ ಶಿಬಿರದಲ್ಲಿ ಕೈಗೊಳ್ಳಲಿದೆ :೧. ಸುಸಜ್ಜಿತ ಕ್ಲಿನಿಕ್ ಮೂಲಕ ಎಲ್ಲರಿಗೂ ಉಚಿತ ಚಿಕಿತ್ಸೆ. ೨. ಸತ್ಸಂಗಕ್ಕಾಗಿ ದೇವಸ್ಥಾನದಿಂದ ಕೂಡಿದ ವಿಶಾಲ ಪೆಂಡಾಲ್ ೩. ಸುಮಾರು ಸಾವಿರ ಜನ ಭಕ್ತರಿಗೆ ಉಚಿತ ಊಟ ಮತ್ತು ವಸತಿ ವ್ಯವಸ್ಥೆ ೪. ರಾಮಕೃಷ್ಣ ವಿವೇಕಾನಂದ ಮತ್ತು ವೇದಾಂತ ಸಾಹಿತ್ಯದ ಪ್ರಸರಣೆಗಾಗಿ ಒಂದು ಪುಸ್ತಕ ಕೇಂದ್ರ. ೫. ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಜೀವನ ಮತ್ತು ಉಪದೇಶಗಳನ್ನೂ ವೈದಿಕ ಕಾಲದಿಂದಲೂ ಬೆಳೆದು ಬಂದ ಭಾರತದ ಸಾಂಸ್ಕೃತಿಕ ಪರಂಪರೆಯನ್ನೂ ಚಿತ್ರಿಸುವ ಒಂದು ಚಿತ್ರ ಪ್ರದರ್ಶನ.

ಶ್ರೀರಾಮಕೃಷ್ಣರು ಹೇಳುತ್ತಿದ್ದರು,'ಎಲ್ಲಿ ಭಗವದ್ಭಕ್ತರ ಸಮಾವೇಶವಾಗುತ್ತದೆಯೋ,ಅಲ್ಲಿ ಭಗವಂತನ ಭಾವ ವಿಶೇಷವಾಗಿ ಉದ್ದೀಪನವಾಗುವುದು' ಎಂದು. ಅದಲ್ಲದೆ ಅವರು ಭಾಗವತ, ಭಕ್ತ, ಭಗವಾನ್– ಇವು ಮೂರೂ ಒಂದೇ ಎಂದು ಪರಿಗಣಿಸಿದ್ದರು. ಅಂತಹ ಭಗವದ್ಭಕ್ತರ ಬೃಹದ್ ಸಮೂಹವಾದ ಕುಂಭಮೇಳದಲ್ಲಿ ಭಗವಂತನ ವಿಶೇಷ ಸಾನ್ನಿಧ್ಯವಿರುತ್ತದೆ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ.